# ಭಾರತೀಯ ಜನತಾ ಪಾರ್ಟಿ
# (ಕೇಂದ್ರ ಕಚೇರಿ)
# 11, ಅಶೋಕ ರಸ್ತೆ, ನವದೆಹಲಿ–01

06 ಮಾರ್ಚ 2014

## ಶ್ರೀಮತಿ ಮೀನಾಕ್ಷಿ ಲೇಖಿ ಅವರ ಪತ್ರಿಕಾ ಪ್ರಕಟಣೆ

### ಆಪ್ ಕೆ ಪಾಪ್

1. ಕಾಂಗ್ರೆಸ್ ದುರ್ನಡತೆ ವಿಭಾಗ ಇತ್ತೀಚೆಗೆ ಆಪ್ ಪಕ್ಷದ ಕಾರ್ಯಕರ್ತರನ್ನು ತನ್ನ ದಾಂಡಿಗರಾಗಿ ಗುತ್ತಿಗೆ ಪಡೆದಂತಿದೆ. ಗುಜರಾತ್‌ನಲ್ಲಿ ಕೇಜ್ರಿವಾಲ್ ಕುರಿತ ಸಣ್ಣ ಪ್ರಕರಣವನ್ನು ರಾಷ್ಟ್ರೀಯ ಭದ್ರತೆಗೆ ಧಕ್ಕೆ ತರುವಂತಹ ಪ್ರಕರಣವೆಂದು ವೈಭವೀಕರಿಸಲು ಕಾರಣವೇನು? ಇದಕ್ಕೆ ಸುಲಭ ಉತ್ತರವಿದೆ. ತಾನು ಮಾಡಿದ ಹಗರಣಗಳಿಂದ ಜನರ ಗಮನವನ್ನು ವಿಚಲಿತಗೊಳಿಸುವ ನೈಪುಣ್ಯತೆಯನ್ನು ಕಾಂಗ್ರೆಸ್ ಪುನರಾವರ್ತಿಸಿದೆ. ಭಾಜಪ ಅಥವಾ ಮೋದಿಗೆ ಎಎಪಿ ಪಕ್ಷ ಯಾವುದೇ ಭೀತಿ ಹುಟ್ಟಿಸುವುದಿಲ್ಲ. ಅವರು ಪ್ರಭಾವಿ ರಾಷ್ಟ್ರೀಯ ಪಕ್ಷವೇನಲ್ಲ. ಅವರಿಗೆ ಲಭಿಸುವ ದೇಣಿಗೆ ಸೇರಿದಂತೆ ಪ್ರತಿಯೊಂದು ವಿಚಾರವೂ ಸಂದೇಹಾಸ್ಪದವಾಗಿದೆ. ಅವರ ಮುಖ್ಯ ಸದಸ್ಯರು ಮೂಲತಃ ಶ್ರೀಮತಿ ಸೋನಿಯ ಗಾಂಧಿಯವರ ಸಂವಿಧಾನವನ್ನು ಮೀರಿದ ಸರ್ಕಾರೇತರ ಸೇವಾ ಸಂಸ್ಥೆ ಎನ್‌ಎಸಿಯಿಂದ ಬಂದವರು. ಆ ಪಕ್ಷದ ಕಾನೂನು ಪಂಡಿತರು ಪ್ರತ್ಯೇಕತಾವಾದವನ್ನು ಪ್ರತಿಪಾದಿಸುವ ವಿಚಾರ ಎಲ್ಲರಿಗೂ ಗೊತ್ತಿದ್ದು, ಅವರಲ್ಲಿ ಹಲವರು ಭಾರತದ ವಿರುದ್ಧ ಯುದ್ಧ ಸಾರುವ ಪ್ರಯತ್ನವೂ ನಡೆಸಿದ್ದಾರೆ. ಇದೇ ಎಎಪಿ ವ್ಯಕ್ತಿತ್ವ. ಕಾಂಗ್ರೆಸ್ ಪಕ್ಷದ ಪ್ರತಿಯೊಂದು ಸಾರ್ವಜನಿಕ ಸಭೆಗಳಲ್ಲಿ ಪ್ರೇಕ್ಷಕರ ಸಂಖ್ಯೆ ಕಡಿಮೆ ಆಗುತ್ತಿದ್ದು, ಇದನ್ನು ಮರೆಮಾಚಲು ಎಎಪಿ ನಮ್ಮ ಮೇಲೆ ಎಗರಿ ಬೀಳಲು ಪ್ರೇರೇಪಿಸಲಾಗುತ್ತಿದೆ. ಬರುವ ಕೆಲವು ತಿಂಗಳಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರ ಸಂಖ್ಯೆ ಎರಡಂಕಿಗೆ ಇಳಿಯುವ ಸೂಚನೆ ಕಂಡುಬರುತ್ತಿದೆ.
2. 2004ರಲ್ಲಿ ಅಡ್ವಾಣಿಯವರನ್ನು (ಉಪ ಪ್ರಧಾನಿ) ಪಾಟ್ನಾ ಜಿಲ್ಲಾಧಿಕಾರಿ ತಡೆದಿದ್ದರು. "ನನ್ನ ಭಾಷಣವನ್ನು ರಾತ್ರಿ 10 ಗಂಟೆ ವೇಳೆಗೆ ಮುಗಿಸಿ ಮರ್ಯಾದೆಗೆ (ಚುನಾವಣಾ ನೀತಿ ಸಂಹಿತೆ) ತಲೆಬಾಗುತ್ತೇನೆ", ಎಂದು ಅವರು ಮಾತು ನೀಡಿದ್ದರು. ಕಳೆದ ಅಕ್ಟೋಬರ್‌ನಲ್ಲಿ ಬಾಂಬ್ ಸ್ಫೋಟಗೊಂಡು ಐದು ಮಂದಿ ಅಸುನೀಗಿದಾಗ ಭಾಜಪ ದಾಂಧಲೆಗೆ ಇಳಿಯಲಿಲ್ಲ. ದೇಶದ ಕಾನೂನು ಪಾಲನೆ ಮಾಡುವ ಉದ್ದೇಶದಿಂದ ಭಾಜಪ ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ. ಇದನ್ನು ಇಂದು ಎಎಪಿ ಆಡಿದ ನಾಟಕದೊಂದಿಗೆ ಹೋಲಿಸಿ. ನಾವು ಕಾನೂನು ಪಾಲನೆಯಲ್ಲಿ ವಿಶ್ವಾಸವಿರುವ ಪಕ್ಷ, ಅರಾಜಕತೆ ಅನುಪಾಲಕರಲ್ಲ. ಚುನಾವಣಾ ನೀತಿ ಸಂಹಿತೆ ಜಾರಿಗೆ ಬಂದಾಗ, ಕೇಜ್ರಿವಾಲ್ ಅದನ್ನು ಗೌರವಿಸಬೇಕು. ಕೇಜ್ರಿವಾಲ್ ಅವರನ್ನು ನಿಲ್ಲಿಸಲು ಚುನಾವಣಾ ಆಯುಕ್ತರೇ ಆದೇಶ ಹೊರಡಿಸಿದ್ದರು. ಲಿಬಿಯ ಅಥವಾ ಸಿರಿಯ ದೇಶಗಳನ್ನು ನಾವು ಅನುಕರಿಸಬೇಕೆ?
3. ಚುನಾವಣೆ ಘೋಷಣೆಯಾದ ತಕ್ಷಣ ಚುನಾವಣಾ ಪ್ರಚಾರ ನಿರೂಪಿಸುವ ನೀತಿ ಸಂಹಿತೆ ಜಾರಿಗೆ ಬರುತ್ತದೆ. ರಾಜಕೀಯ ಮತ್ತು ಚುನಾವಣಾ ಸಂಬಂಧಿ ವಿಚಾರಗಳಲ್ಲಿ

ಪೊಲೀಸರು ಮತ್ತು ಜಿಲ್ಲಾ ಆಡಳಿತ ಚುನಾವಣಾ ಆಯೋಗಕ್ಕೆ ಉತ್ತರದಾಯಿ ಆಗುತ್ತವೆ. ಅರವಿಂದ್ ಕೇಜ್ರಿವಾಲ್ ಅವರನ್ನು ವಶಕ್ಕೆ ಪಡೆದಿರಲಿಲ್ಲ ಅಥವ ಬಂಧಿಸಿರಲಿಲ್ಲ. ಅಥವಾ ಅವರ ವಿರುದ್ಧ ಯಾವುದೇ ದೂರು ದಾಖಲಿಸಲಿಲ್ಲ. ಸಂಹಿತೆಯಂತೆ ರೋಡ್‌ಶೋ ಉದ್ದೇಶ ಕೇಳಲು ಮತ್ತು ಅವರ ವಾಹನಗಳ ಸಂಚಾರಕ್ಕೆ ಅನುಮತಿ ಪಡೆಯುವಂತೆ ಸೂಚಿಸಲು ಅವರನ್ನು ನಿಲ್ಲಿಸಲಾಗಿತ್ತು. ಕಾನೂನಿನಂತೆ ಪೊಲೀಸರು ತಮ್ಮ ಕರ್ತವ್ಯ ಪಾಲಿಸಬಾರದೆ? ಒಬ್ಬ ವ್ಯಕ್ತಿ ಪ್ರಮುಖ ಮಾಜಿ ಐಆರ್‌ಎಸ್ ಅಧಿಕಾರಿಯಾದ ಮಾತ್ರಕ್ಕೆ ಮಾನ್ಯರನ್ನು ವಿಚಾರಿಸಕೂಡದೆ. ಕಂದಾಯ ಸೇವೆಗಳು ಸೇರಿದಂತೆ ವಿವಿಧ ಸರ್ಕಾರಿ ವಿಭಾಗಗಳಿಂದ ಅಧಿಕಾರಿಗಳನ್ನು ಚುನಾವಣಾ ಆಯೋಗ ನಿಯೋಜಿಸುತ್ತದೆ. ಈ ಕಾನೂನು ಸಂಬಂಧಿ ವಿಚಾರಗಳನ್ನು ಅರಿಯುವಷ್ಟು ದಿವಸಗಳು ಅವರು ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸಲಿಲ್ಲವೋ ಅಥವಾ ಕಾಂಗ್ರೆಸ್ ಪಕ್ಷ ಪ್ರಾಯೋಜಿತ ಕಾರ್ಯಕ್ರಮದಿಂದ ಅಗ್ಗದ ಪ್ರಚಾರ ಗಿಟ್ಟಿಸಲು, ತಿಳಿದೂ ತಿಳಿಯದಂತೆ ವರ್ತಿಸಿದ್ದರೋ?

4. ಸ್ವಘೋಷಿತ ಬಂಡಾಯ ನಾಯಕ ಹಾಗೂ ಸಿಐಎ ಗೂಢಚಾರಿ ಎಂಬ ಆರೋಪ ಎದುರಿಸುತ್ತಿರುವ ಅರವಿಂದ್ ಕೇಜ್ರಿವಾಲ್ ಸಾರ್ವಜನಿಕರ ಗಮನವನ್ನು ಅಗಸ್ಟಾವೆಸ್ಟ್‌ಲ್ಯಾಂಡ್ ಹಗರಣದಿಂದ ಬೇರೆಡೆಗೆ ವಿಚಲಿತಗೊಳಿಸುವಂತೆ ತಮ್ಮ ಮಾಲಿಕರಿಂದ ಆದೇಶಿಸಲ್ಪಟ್ಟಿದ್ದಾರೆ. ಅಗಸ್ಟಾವ್ಯಸ್ಟ್‌ಲ್ಯಾಂಡ್ ಸಂಸ್ಥೆಯಿಂದ 12 ವಿವಿಐಪಿ ಹೆಲಿಕಾಪ್ಟರ್ ಖರೀದಿಸಲು 3600 ಕೋಟಿ ರೂಪಾಯಿ (ಸುಮಾರು 770 ದಶಲಕ್ಷ ಡಾಲರ್) ಲಂಚ ಸ್ವೀಕರಿಸುವ ಹಗರಣದಲ್ಲಿ ಕಾಂಗ್ರೆಸ್ ಮುಖ್ಯಸ್ಥೆ ಹಾಗೂ ಆಕೆಯ ಕುಟುಂಬದ ಸದಸ್ಯರು ಭಾಗಿಯಾಗಿದ್ದಾರೆ ಎಂಬ ಸಂಕೇತಗಳನ್ನು ನೀಡಿರುವ ಮಧ್ಯವರ್ತಿಗಳ ಕುರಿತು ಸಿಬಿಐ ನಡೆಸುತ್ತಿರುವ ತನಿಖೆಯಿಂದ ಸಾರ್ವಜನಿಕರ ಗಮನವನ್ನು ಬೇರೆಡೆಗೆ ಹರಿಸುವ ಈ ನಾಟಕ ಹೂಡಲಾಗಿದೆ. ಈ ಪ್ರಕರಣದಲ್ಲಿ, ರೋಲ್ಸ್‌ರಾಯ್ಸ್ ವ್ಯವಹಾರ, ಲೂಟ್ಯನ್ ಹಗರಣ, ನ್ಯಾಷನಲ್ ಹೆರಾಲ್ಡ್ ಹಗರಣ, ಅಗಸ್ಟಾವ್ಯಸ್ಟ್‌ಲ್ಯಾಂಡ್ ಹಗರಣ ಹಾಗೂ ಯಾರಿಗೆ ಗೊತ್ತು ಮತ್ತೆಷ್ಟೋ ಹಗರಣಗಳು ಹುದುಗಿವೆ.

5. ಅಥವಾ ಅಶ್ವಿನಿ ಬಹಿರಂಗ ಪಡಿಸಿದ ವಿಚಾರಗಳಿಂದ ಗಮನ ಬೇರೆಡೆಗೆ ಸರಿಸಲು ಈ ನಾಟಕವನ್ನು ಎಎಪಿ ಹೂಡಿತ್ತೆ: ಬೆಳಗ್ಗೆ 11 ಗಂಟೆಗೆ ಈ ವರದಿಯನ್ನು ಸಲ್ಲಿಸಲಾಗಿತ್ತು. ಪತ್ರಿಕಾಗೋಷ್ಠಿಯನ್ನು ಮಧ್ಯಾಹ್ನ 2.00 ಗಂಟೆಗೆ ಏರ್ಪಡಿಸಲಾಗಿತ್ತು. ಪ್ರೆಸ್ ಕ್ಲಬ್‌ನಲ್ಲಿ ಸೇರಿದ್ದ ಪತ್ರಕರ್ತರಿಗೆ ಬಂಡಾಯ ಅಭ್ಯರ್ಥಿ ಅಶ್ವಿನಿ ಕುಮಾರ್ ಉಪಾಧ್ಯಾಯ ಅವರು ಎಎಪಿ ಮುಚ್ಚಿಟ್ಟ ಹಲವಾರು ವಿಚಾರಗಳ ಕುರಿತು ತಿಳಿಸಿದ್ದರು. ಎಎಪಿ ರಾಷ್ಟ್ರೀಯ ಪರಿಷತ್ ಸದಸ್ಯರಾದ ಅಶ್ವಿನಿ ಕುಮಾರ್ ಉಪಾಧ್ಯಾಯ ಅವರು ತಮ್ಮ ಪಕ್ಷ ಅಥವಾ ಕಡೆಪಕ್ಷ ಅದರ ನಾಯಕರು ಅಮೇರಿಕದ ಕೇಂದ್ರೀಯ ಬೇಹುಗಾರಿಕೆ ಸಂಸ್ಥೆ ಸಿಐಎದೊಂದಿಗೆ ಸಂಬಂಧ ಹೊಂದಿದ್ದಾರೆ ಎಂಬ ಗುಮಾನಿ ವ್ಯಕ್ತಪಡಿಸಿದ್ದಾರೆ. ಪಕ್ಷದ ರಾಷ್ಟ್ರೀಯ ಪರಿಷತ್ತಿನಲ್ಲಿರುವ 300 ಸದಸ್ಯರಲ್ಲಿ ಸುಮಾರು 50 ಮಂದಿ ಬೇಸತ್ತಿದ್ದಾರೆ ಅಥವಾ ರಾಜಿನಾಮೆ ನೀಡಿದ್ದಾರೆ. 'ಸಿಐಎ,ಐಎಸ್ಐ, ಫೋರ್ಡ್ ಫೌಂಡೇಷನ್ ಹಾಗೂ ವಿದೇಶಿ ದೇಣಿಗೆ ಪಡೆದ ಭಾರತದ ಕೆಲವು ಸರ್ಕಾರೇತರ ಸೇವಾ ಸಂಸ್ಥೆಗಳು ಮತ್ತು ವ್ಯಕ್ತಿಗಳ ರಾಷ್ಟ್ರವಿರೋಧಿ ಚಟುವಟಿಕೆಗಳು' ಎಂಬ ಶೀರ್ಷಿಕೆಯಡಿ ಉಪಾಧ್ಯಾಯ ಅವರು ಮಾರ್ಚ್ 4ರಂದು ಇಮೇಲ್ ಮಾಡಿದ ಹೇಳಿಕೆಯನ್ನು ಯಥಾವತ್ತಾಗಿ ಕೆಳಗೆ ಪ್ರಕಟಿಸಲಾಗಿದೆ:

6. ಮಾನ್ಯರೆ, ಭಾರತದ ಹಲವಾರು ಸರ್ಕಾರೇತರ ಸೇವಾ ಸಂಸ್ಥೆಗಳಿಗೆ ಹಾಗೂ ವ್ಯಕ್ತಿಗಳಿಗೆ ಅಮೇರಿಕಾದ ಸಿಐಎ, ಪಾಕಿಸ್ತಾನದ ಐಎಸ್ಐ, ಅಮೇರಿಕಾದಲ್ಲಿರುವ ಎನ್‌ಜಿಓ ಫೋರ್ಡ್ ಫೌಂಡೇಷನ್, ಎನ್‌ಜಿಓ ಆವಜ್ಞ ಹಾಗೂ ಅನ್ಯ ವಿದೇಶಿ ರಾಷ್ಟ್ರಗಳು ನೇರವಾಗಿ ಅಥವಾ ಪರೋಕ್ಷವಾಗಿ ದೇಣಿಗೆ ನೀಡುತ್ತವೆ. ಫೋರ್ಡ್ ಫೌಂಡೇಷನ್/ ವಿದೇಶಿ ದಾನಿಗಳು ದೇಣಿಗೆ ನೀಡುವ ಭಾರತದ ಸರ್ಕಾರೇತರ ಸೇವಾ ಸಂಸ್ಥೆಗಳು ಹಾಗೂ ವ್ಯಕ್ತಿಗಳು ಪ್ರತ್ಯೇಕತಾವಾದ, ನಕ್ಸಲ್‌ವಾದ, ಮಾವೋವಾದ, ಆತಂಕವಾದಕ್ಕೆ ನೇರವಾಗಿ ಅಥವಾ ಪರೋಕ್ಷವಾಗಿ ಬೆಂಬಲ ವ್ಯಕ್ತಪಡಿಸುತ್ತಿದ್ದು ದೇಶವಿರೋಧಿ ಚಟುವಟಿಕೆಗಳಲ್ಲಿ ತೊಡಗಿವೆ. ಫೋರ್ಡ್ ಫೌಂಡೇಶನ್/ವಿದೇಶಿ ದಾನಿಗಳು ನೀಡುವ ಹಣದಿಂದ ಭಾರತದ ಸರ್ಕಾರೇತರ ಸೇವಾ ಸಂಸ್ಥೆಗಳು ಹಾಗೂ ವ್ಯಕ್ತಿಗಳು ಜಾತಿ, ಪಂಗಡ ಅಥವಾ ಧರ್ಮದ ಆಧಾರದ ಮೇಲೆ ಸಮಾಜವನ್ನು ಪ್ರತ್ಯೇಕಿಸುತ್ತಿದ್ದು ದೇಶದ ಏಕತೆ ಮತ್ತು ಸಮಗ್ರತೆಗೆ ಧಕ್ಕೆ ಉಂಟುಮಾಡುತ್ತಿದ್ದಾರೆ. ಅಮೇರಿಕಾದ ಸಿಐಎ ಹಾಗೂ ಪಾಕಿಸ್ತಾನದ ಐಎಸ್ಐ ಹೂಡಿರುವ ದೊಡ್ಡ ಪಿತೂರಿಯ ಭಾಗವಾಗಿ ಫೋರ್ಡ್ ಫೌಂಡೇಶನ್ ಹಾಗೂ ವಿದೇಶಿ ದಾನಿಗಳಿಂದ ದೇಣಿಗೆ ಪಡೆದ ಹಲವಾರು ಸರ್ಕಾರೇತರ ಸೇವಾ ಸಂಸ್ಥೆಗಳ ಪ್ರತಿನಿಧಿಗಳು ಹಾಗೂ ವ್ಯಕ್ತಿಗಳು ವಿಧಾನ ಸಭೆ ಹಾಗೂ ಲೋಕಸಭೆ ಚುನಾವಣೆಗಳಲ್ಲಿ ಸ್ಪರ್ಧಿಸುತ್ತಿದ್ದಾರೆ. ಫೋರ್ಡ್ ದೇಣಿಗೆ ಪಡೆದ ಸಾಮಾಜಿಕ ಕಾರ್ಯಕರ್ತರು ಮತ್ತು ಅವರ ಕುಟುಂಬ ಸದಸ್ಯರ ವಿರುದ್ಧ ತನಿಖೆ ನಡೆಸಿದರೆ 2000 ಹಾಗೂ 2012ರ ನಡುವೆ ಫೋರ್ಡ್ ತಂಡದ ಸದಸ್ಯರು ಹಾಗೂ ಫೋರ್ಡ್ ಫೌಂಡೇಶನ್ ಇಂಡಿಯ ಪ್ರತಿನಿಧಿಗಳ ಜಾಲವನ್ನು ಪತ್ತೆ ಹಚ್ಚಬಹುದಾಗಿದೆ ಮತ್ತು ಸತ್ಯ ಹೊರ ಬರಲಿದೆ.
7. ಎಎಪಿಯ ಆಂತರಿಕ ಲೋಕಪಾಲರಾದ ಅಡ್ಮಿರಲ್ (ನಿವೃತ್ತ) ಲಕ್ಷ್ಮಿನಾರಾಯಣ್ ರಾಮದಾಸ್ ಹಾಗೂ ಅವರ ಕುಟುಂಬದ ಸದಸ್ಯರು ಫೋರ್ಡ್ ಫೌಂಡೇಶನ್‌ನೊಂದಿಗೆ ಸಂಪರ್ಕ ಹೊಂದಿದ್ದಾರೆ. ಅಡ್ಮಿರಲ್ ರಾಮದಾಸ್ ಹಿರಿಯ ಪುತ್ರಿ ಕವಿತಾ ಎನ್ ರಾಮದಾಸ್ ದಕ್ಷಿಣ ಏಶ್ಯಾ ಫೋರ್ಡ್ ಫೌಂಡೇಶನ್ ಮುಖ್ಯಸ್ಥೆಯಾಗಿದ್ದಾರೆ. ಅಡ್ಮಿರಲ್ ರಾಮದಾಸ್ ಪತ್ನಿ ಲೀಲಾ ರಾಮದಾಸ್ ಅವರು ವಿಶಾಖಾ ಮಾರ್ಗಸೂಚಿಯಡಿ ರೂಪಿಸಲಾದ ಸಮಿತಿಯ ಮುಖ್ಯಸ್ಥೆಯಾಗಿದ್ದಾರೆ. ರಾಮದಾಸ್ ಅವರು ರಮೋನ್ ಮೆಗ್ಸೆಸೆ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಅರವಿಂದ್ ಕೇಜ್ರಿವಾಲ್ ಅವರಿಗೆ ಈ ಪ್ರಶಸ್ತಿ ದೊರೆಯಲು ರಾಮದಾಸ್ ಕುಟುಂಬ ಶ್ರಮಿಸಿತ್ತು.
8. ನಾವು ಯಾವುದೇ ಒಂದು ರಾಜಕೀಯ ಪಕ್ಷದ ಸಿದ್ಧಾಂತದ ವಿರೋಧಿಗಳಲ್ಲ. ನಾನು ರಾಷ್ಟ್ರ ವಿರೋಧಿ ಉದ್ಧೇಶ ಹೊಂದಿದವರ (ಅಂದರೆ ಕಾಶ್ಮೀರ, ಬಾಟ್ಲಾ, ತೌಕಿರ್, ಇಶ್ರತ್, 26 ಜನವರಿ ಗಣತಂತ್ರ ದೃಷ್ಟಿಕೋನ, ಘಾತಕ ನಕ್ಸಲರು ಎಎಪಿ ಸೇರುವವರ) ವಿರೋಧಿಯಾಗಿದ್ದೇನೆ. ಸ್ವತಂತ್ರ ಅಭಿಪ್ರಾಯ ಹೊಂದುವ ಹಕ್ಕು ಪ್ರತಿಯೊಬ್ಬರಿಗೂ ಇದೆ. ಸ್ವತಂತ್ರ ಅಭಿಪ್ರಾಯ ಹೊಂದಿರುವ ವಿಶ್ವಾಸವಾದರು ಅವರಿಗಿದೆ-ಆದರೆ ಕಲ್ಲು ಮತ್ತು ಲಾಠಿಗಳ ಮೂಲಕ ಈ ಸ್ವತಂತ್ರ ಅಭಿಪ್ರಾಯ ವ್ಯಕ್ತಪಡಿಸುವ ಬಗೆ ಅರ್ಥವಾಗದು. ಅವರು ಪ್ರತಿಪಾದಿಸುವ ತತ್ವಗಳು ಕೇವಲ ಹುಸಿ ತತ್ವಗಳು, ತೋರಿಕೆಯ ಮಾತುಗಳು. ಕಾಶ್ಮೀರ, ನಕ್ಸಲರು ಇತ್ಯಾದಿ ವಿಚಾರಗಳಲ್ಲಿ ರಾಷ್ಟ್ರ ವಿರೋಧಿ ಸಿದ್ಧಾಂತಗಳನ್ನು ಹೊರತು ಪಡಿಸಿದರೆ ಅದರಲ್ಲಿ ಸತ್ವವಿಲ್ಲ. ಎಎಪಿಗೆ ದೇಣಿಗೆ ನೀಡಿದವರಿಗೆ ನನ್ನ ಪ್ರಶ್ನೆ- ಅದರ

ಹಿಂಸಾತ್ಮಕ ಕೃತ್ಯಗಳಿಂದ ನಿಮಗೆ ಸಂತಸವಾಗಿದೆಯೇ– ತಿಲಕ್ ನಗರ್ ಶಾಸಕ ಜರ್ನೇಲ್ ಸಿಂಗ್ ಕಲ್ಲು ಬೀಸುವ ಚಿತ್ರಗಳಿವೆ – ಅವರಿಗೆ ನಾಚಿಕೆಯಾಗಬೇಕು.

(ಇ.ಆರ್. ಅರುಣ್ ಕುಮಾರ್ ಜೈನ್)
ಕಚೇರಿ ಕಾರ್ಯದರ್ಶಿ